# ಕೋಲಾರ ಜನತೆಯ ನಿರೀಕ್ಷೆಗಳು ಬಜೆಟ್‌ನಲ್ಲಿ ಸಾಕಾರ : ಸಚಿವ ಬಿ.ಎಸ್. ಸುರೇಶ್

● ಪ್ರಜಾವಾಹಿನಿ–ಕೋಲಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 16ನೇ ಬಜೆಟ್‌ನ್ನು ಇಂದು ಮಂಡಿಸುವ ಮೂಲಕ ತಮ್ಮ ದಾಖಲೆಯನ್ನು ತಾವೇ ಮುರಿದಿದ್ದಾರೆ. ಕಳೆದ ವರ್ಷ ರೂ.3.71ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದರು, ಪ್ರಸಕ್ತ ಸಾಲಿನಲ್ಲಿ ಬಜೆಟ್ ಗಾತ್ರ ರೂ.4.09ಲಕ್ಷ ಕೋಟಿಗೆ ಏರಿಸಲಾಗಿದೆ.

2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಘೋಷಿಸಲಾಗಿದ್ದ, ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಈ ಬಾರಿಯ ಬಜೆಟ್‌ನಲ್ಲಿಯೂ ಅದಕ್ಕಾಗಿ 51340 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಲಾಗಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಎಸ್ ಸುರೇಶ ಅವರು ತಿಳಿಸಿದ್ದಾರೆ.

ಕೋಲಾರ ಜಿಲ್ಲೆಯ ಮೇಲೆ ವಿಶೇಷ ಗಮನಹರಿಸಿರುವ ಮಾನ್ಯ ಮುಖ್ಯಮಂತ್ರಿಗಳು ಕೋಲಾರಕ್ಕಾಗಿ ಭರಪೂರ ಕೊಡುಗೆಗಳನ್ನು ಬಜೆಟ್‌ನಲ್ಲಿ ನೀಡಿದ್ದಾರೆ.



ಕೋಲಾರದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಬೆಳೆಗೆ ಪ್ರತಿ ಕ್ವಿಂಟಾಲ್‌ಗೆ ರೂ.7550ಗಳ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ರೂ.450ಗಳ ಪ್ರೋತ್ಸಾಹಧನವನ್ನು ಘೋಷಣೆ ಮಾಡಲಾಗಿದೆ.

ಸಾರ್ವಜನಿಕಖಾಸಗಿ ಸಹಭಾಗಿತ್ವದಲ್ಲಿ ಕೋಲಾರ ಜಿಲ್ಲೆಯ ಕೆ.ಜಿ.ಎಫ್‌ನಲ್ಲಿ ಆಧುನಿಕ ಎ.ಪಿ.ಎಂ.ಸಿ ಮಾರುಕಟ್ಟೆ ನಿರ್ಮಾಣ ಘೋಷಣೆ ಸ್ವಾಗತಾರ್ಹ, ಅಂತೆಯೇ ಕೋಲಾರ ತಾಲ್ಲೂಕಿನ ನರಸಾಪುರ ಕೈಗಾರಿಕ ವಲಯದಲ್ಲಿ ರೂ.173ಕೋಟಿಗಳ ವೆಚ್ಚದಲ್ಲಿ 6000 ಸಾಮರ್ಥ್ಯದ ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯ ಯೋಜನೆ ಘೋಷಣೆ ಮಾಡಿರುವುದು, ದುಡಿಯುವ ಮಹಿಳೆಯರಿಗೆ ಹೆಚ್ಚಿನ ಉತ್ತೇಜನ ನೀಡಿದಂತಾಗಿದೆ.

ಇಂನಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನ ಒಬಿಸಿ ವಿದ್ಯಾರ್ಥಿಗಳಿಗಾಗಿ ಎರಡು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಘೋಷಣೆ ಮಾಡಲಾಗಿದೆ. ಜಿಲ್ಲೆಯ ಒಂದು ವಸತಿ ಶಾಲೆಯನ್ನು ಪಿ.ಯು ಕಾಲೇಜಾಗಿ ಉನ್ನತಿಕರಿಸಿ ಘೋಷಿಸಲಾಗಿದೆ.

ಇದಲ್ಲದೇ ಉತ್ಕೃಷ್ಟ ವೈದ್ಯಕೀಯ ಶಿಕ್ಷಣ ಸೌಲಭ್ಯ ನೀಡುವ ನಿಟ್ಟಿನಲ್ಲಿ ನಮ್ಮ ಸರ್ಕಾರವು ಕೋಲಾರದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಮುಂದಾಗಿರುವುದು, ಅತೀವ ಸಂತೋಷವನ್ನು ಉಂಟು ಮಾಡಿದೆ. ಮಾಲೂರು ತಾಲ್ಲೂಕು ಆಸ್ಪತ್ರೆಯನ್ನು ಉನ್ನತೀಕರಿಸಲು ಮುಂದಾಗಿರುವುದು ಸಹ ಸರ್ಕಾರಕ್ಕೆ ಸಾರ್ವಜನಿಕರ ಆರೋಗ್ಯ ಮೇಲಿನ ಕಾಳಜಿಯನ್ನು ತೋರಿಸುತ್ತದೆ.

ಮಾಲೂರು ತಾಲ್ಲೂಕಿನ ಶಿವಾರ ಪಟ್ಟಣ ಕೈಗಾರಿಕ ಪ್ರದೇಶದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಒಣಟಣು ಖಜಭಿಣಿಅಡಿ ಓಜಣ ಚಜಡಿಅ ಖಣಾಣಚಿಟಿಚಿಭುಟಣಥಿ ಖಟಿಜಣಾಣಡುಚಿಟ ಕಚಿಡಿಞ ನ್ನು ನಿರ್ಮಾಣ ಮಾಡಲು ಕೈಗೆತ್ತಿಕೊಂಡಿರುವುದು ಸ್ವಾಗತಾರ್ಹ.

ಸರ್ಕಾರವು ಕೋಲಾರ ಜಿಲ್ಲೆಯಲ್ಲಿ ಹೊಸ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆಗೆ ಮುಂದಾಗಿದೆ. ಕೆ.ಜಿ.ಎಫ್ ಬಳಿ ಭಾರತೀಯ ಮೀಸಲುಪಡೆ ಸ್ಥಾಪಿಸಲು ರೂ.40ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿದೆ. ಕೆ.ಜಿ.ಎಫ್‌ನಲ್ಲಿ ತಾಲ್ಲೂಕು ಪ್ರಜಾಸೌಧ ಲೋಕಾರ್ಪಣೆಗೆ ಸಿದ್ಧಗೊಂಡಿದೆ.

ಕೃಷಿ, ತೋಟಗಾರಿಕೆ, ಶಿಕ್ಷಣ, ನೀರಾವರಿ, ಆರೋಗ್ಯ ಸೇರಿದಂತೆ ಸೇವಾ ಕ್ಷೇತ್ರಗಳಿಗೆ ನಮ್ಮ ಸರ್ಕಾರ ಹೆಚ್ಚು ಒತ್ತು ನೀಡಿ ರಾಜ್ಯದ ಸರ್ವಜನರ ಅಭಿವೃದ್ಧಿಗೆ ಪೂರಕವಾದ ಬಜೆಟ್‌ನ್ನು ಮುಖ್ಯಮಂತ್ರಿಗಳು ಇಂದು ಮಂಡಿಸಿದ್ದಾರೆ. ಕೋಲಾರ ಜಿಲ್ಲೆಯ ಅಭಿವೃದ್ಧಿಗೆ ಪೂರಕ ಬಜೆಟ್‌ನ್ನು ಮಂಡಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಒಂದು ಟ್ರಿಲಿಯನ್ ಆರ್ಥಿಕ ರಾಜ್ಯವಾಗುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನು ಇರಿಸಿರುವ ಮಾನ್ಯ ಮುಖ್ಯಮಂತ್ರಿಗಳು ಸರ್ವಜನರ ಅಭಿವೃದ್ಧಿಗಾಗಿ ಸಮ–ಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸಂಕಲ್ಪ ತೊಟ್ಟಿದ್ದು, ಎಲ್ಲರಿಗೂ ಅನುಕೂಲವಾಗುವಂತ ಸರ್ವಜನರ ಹಿತದೃಷ್ಟಿಯ ಬಜೆಟ್ ಇದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

# ರೈತರಿಗೆ ಈ ಬಜೆಟ್ ವರದಾನವಾಗಿದೆ






● ಪ್ರಜಾವಾಹಿನಿ–ಕೊರಟಗೆರೆ

ಕೆರೆಗಳ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ದಾಖಲೆಯ 16ನೇ ಬಜೆಟ್‌ನಲ್ಲಿ ಸಣ್ಣ ನೀರಾವರಿ ಇಲಾಖೆಯ ಎತ್ತಿನಹೊಳೆ ಯೋಜನೆಯಲ್ಲಿ ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಗುರಿ ಹೊಂದಿದ್ದು ರೈತರಿಗೆ ಈ ಬಜೆಟ್ ವರದಾನವಾಗಿದೆ.

ಮಾ.7ರಂದು ರಾಜ್ಯ ಸರ್ಕಾರ ಅಭಿವೃದ್ಧಿಯ 4 ಲಕ್ಷ ಕೋಟಿ ವೆಚ್ಚದ ಬಜೆಟ್‌ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರವರು ಮಂಡಿಸಿದ್ದು, ಬಜೆಟ್‌ನಲ್ಲಿ 553 ಕೋಟಿ ರೂ ವೆಚ್ಚದಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ 45 ಕೆರೆ ಮತ್ತು ಕೊರಟಗೆರೆ 62 ಕೆರೆಗಳಿಗೆ ಎತ್ತಿನಹೊಳೆ ಯೋಜನೆ ಮೂಲಕ ನೀರು ಹೆಚ್ಚಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂಬುದು ಆಯವ್ಯಯದಲ್ಲಿ ತಿಳಿಸಿದ್ದಾರೆ.

ಹೈಟೆಕ್ ಆಸ್ಪತ್ರೆ: ಕೊರಟಗೆರೆ ಕೇಂದ್ರ ಸ್ಥಾನದಲ್ಲಿರುವ ತಾಲ್ಲೂಕು ಆಸ್ಪತ್ರೆಯಲ್ಲಿ ಸಮಸ್ಯೆಗಳ ಬಗ್ಗೆ ಈಗಾಗಲೇ ಮಾಧ್ಯಮಗಳಲ್ಲಿ ವರದಿ ಬಿತ್ತರಿಸಿರುವುದು ಒಂದೆಡೆಯಾದರೆ ಅಭಿವೃದ್ಧಿ ಪಡಿಸುವಂತೆ ಕೊರ ರೋಗಿಗಳ ಕುಟುಂಬ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿತ್ತು. ಅದರಂತೆ ಮುಖ್ಯಮಂತ್ರಿ ಸಿದ್ಧರಾಮ್ಯನವರು 16ನೆಯ ದಾಖಲೆಯ ಬಜೆಟ್‌ನಲ್ಲಿ ಕೊರಟಗೆರೆ ಸಾರ್ವಜನಿಕ ಆಸ್ಪತ್ರೆ ನವೀಕರಣಗೊಳಿಸಿ ಆಸ್ಪತ್ರೆಗೆ ಹೈಟೆಕ್ ಸ್ಪರ್ಶ ನೀಡಲು ಪಟ್ಟಣದ ಹೊರಹೊಲಯದ ಕಾಮೇನಹಳ್ಳಿಯಲ್ಲಿ ಈಗಾಗಲೇ ಗುರುತಿಸಲಾದ 4 ಎಕರೆ ಜಾಗದಲ್ಲಿ 100 ಬೆಡ್ ಹಾಸಿಗೆಯುಳ್ಳ ಹಾಗೂ ಹೈಟೆಕ್ ಆಸ್ಪತ್ರೆಯನ್ನು ನಿರ್ಮಿಸುವ ಗುರಿ ಹೊಂದಿದೆ.

ರೈತ ಸಂಘದಿಂದ ಒತ್ತಾಯ: ಈ ವರ್ಷದ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಎತ್ತಿನಹೊಳೆ ಯೋಜನೆಗೆ ಅನುದಾನ ನೀಡಿದ್ದಾರೆ. ಗೃಹ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ ಪರಮೇಶ್ವರ್‌ರವರ ಶ್ರಮಕ್ಕೆ ಕೊರಟಗೆರೆ ತಾಲ್ಲೂಕಿನ 62 ಕೆರೆಗಳ ಅಂತರ್ಜಲ ವೃದ್ಧಿಗೆ ಅನುದಾನ ಬಿಡುಗಡೆಗೊಳಿಸಿರುವುದು ರೈತಾಪಿ ವರ್ಗಕ್ಕೆ ಸಂತಸ ನೀಡಿದೆ. ತಾಲ್ಲೂಕಿನ ಬೈರಗೊಂಡ್ಲು ಗ್ರಾಮದಲ್ಲಿ ಬಫರ್ ಡ್ಯಾಂ ನಿರ್ಮಾಣ ಮಾಡಿ ಭೂಮಿ ಕಳೆದುಕೊಂಡ ರೈತರಿಗೆ ಕೂಡಲೇ ಪರಿಹಾರ ನೀಡುವಂತೆ ರೈತ ಸಂಘದ ಅಧ್ಯಕ್ಷ ಸಿದ್ದರಾಜು ಒತ್ತಾಯ ಮಾಡಿದ್ದಾರೆ.

# ಸಿರಿಧಾನ್ಯ, ರೈತರ ಆರ್ಥಿಕ ಸ್ವಾವಲಂಬನೆಗೂ ಸಾರ : ಇಕ್ಬಾಲ್ ಹುಸೇನ್

● ಪ್ರಜಾವಾಹಿನಿ–ರಾಮನಗರ




ಪೌಷ್ಠಿಕಾಂಶ ಭರಿತ ಸಿರಿಧಾನ್ಯಗಳನ್ನು ಬೆಳೆಯಲು ರಾಜ್ಯ ಸರ್ಕಾರ ರೈತರಿಗೆ ಪ್ರೋತ್ಸಾಹ ನೀಡುತ್ತಿದೆ. ಈ ಹಿಂದೆ ವ್ಯವಸಾಯ ಪದ್ಧತಿಯಲ್ಲಿ ರೈತರು ಸಿರಿಧಾನ್ಯ ಬೆಳೆ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಯಾವುದೇ ಬೆಳೆ ಬೆಳೆಯುತ್ತಿದ್ದರೂ ಜಮೀನಿನ ಒಂದು ಸಾಲಿನಲ್ಲಿ ಸಾಮೆ ಮತ್ತೊಂದು ಕಡೆ ಸ್ವಲ್ಪ ಜಾಗವಿದ್ದಲ್ಲಿ ಅರ್ಕ ಹಾಗೂ ಹೆಚ್ಚು ನೀರು ನಿಲ್ಲುವ ಜಾಗದಲ್ಲಿ ಕೆಂಪಕ್ಕಿಯನ್ನು ಬೆಳೆಯುತ್ತಿದ್ದರು. ಕಾಲಾಂತರದಲ್ಲಿ ಸಿರಿಧಾನ್ಯದ ಮಹತ್ವ ಅರ್ಥವಾಗಿದ್ದು ಸಿರಿಧಾನ್ಯ ಮೇಳಗಳು ರೈತರ ಆರ್ಥಿಕ ಪ್ರಗತಿಗೆ ಅನುಕೂಲವಾಗಿ ಪರಿಣಮಿಸಿವೆ ಎಂದು ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಹೆಚ್.ಎ. ಇಕ್ಬಾಲ್ ಹುಸೇನ್ ಅವರು ಹೇಳಿದರು.

ಅವರು ಮಾ.8ರ ಶನಿವಾರ ನಗರದ ಜಾಲಮಂಗಲ ರಸ್ತೆಯಲ್ಲಿರುವ ವಿಶ್ವನಾಥ ಕನ್ವೆನ್ಷನ್ ಹಾಲ್ ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾಮಟ್ಟದ ಸಿರಿಧಾನ್ಯ ಮೇಳ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ರೈತರ ಸಂಕಷ್ಟಗಳಿಗೆ ರಾಜ್ಯ ಸರ್ಕಾರ ಸದಾ ಸ್ಪಂದಿಸುತ್ತಿದೆ. ಅದಕ್ಕಾಗಿ ಈ ರೀತಿಯ ಮೇಳಗಳನ್ನು ಆಯೋಜಿಸುವ ಮೂಲಕ ರೈತರನ್ನು ಆರ್ಥಿಕವಾಗಿ ಬಲಗೊಳಿಸಲು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ, ಕಾಲಕ್ರಮೇಣ ಆಹಾರ ಶೈಲಿಯಲ್ಲಿ ಬದಲಾದ ಪರಿಣಾಮ ಬಿ.ಪಿ, ಸಕ್ಕರೆ ಸೇರಿದಂತೆ ಇತರೆ ಕಾಯಿಲೆಗಳು ಬರುತ್ತವೆ, ಸಿರಿಧಾನ್ಯಗಳನ್ನು ಆಹಾರದಲ್ಲಿ ಉಪಯೋಗಿಸಿದರೆ ಉತ್ತಮ ಆರೋಗ್ಯದಿಂದ ಇರಬಹುದಾಗಿದೆ, ಜಿಲ್ಲೆಯಲ್ಲಿ ರೇಷ್ಮೆ ಹಾಗೂ ಹಾಲಿಗೆ ಉತ್ತಮ ಪ್ರೋತ್ಸಾಹವಿದ್ದು ಸಿರಿಧಾನ್ಯದತ್ತಲು ರೈತರು ಚಿತ್ತಹರಿಸಬೇಕು ಈ ರೀತಿಯ ಕಾರ್ಯಕ್ರಮಗಳು ರೈತರಲ್ಲಿ ಹೆಚ್ಚಿನ ಅರಿವು ಮೂಡಿಸುತ್ತದೆ ಎಂದು ಹೇಳಿದರು.

ರಾಮನಗರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಕೆ. ರಾಜು ಅವರು ಮಾತನಾಡಿ, ರೈತರ ಆರ್ಥಿಕ ಅಭಿವೃದ್ಧಿಯಲ್ಲಿ ಸಿರಿಧಾನ್ಯ ಮೇಳಗಳಂತ ಕಾರ್ಯಕ್ರಮಗಳು ಅನುಕೂಲವಾಗಿವೆ, ರೈತ ಎಲ್ಲಾ ಕಾಲಕ್ಕೂ ಅನಿವಾರ್ಯ ಅವನು ವ್ಯವಸಾಯ ಮಾಡದೇ ಇದ್ದಲ್ಲಿ ಪ್ರತಿಕೂಲ ಪರಿಣಾಮ ಎದುರಿಸಬೇಕಾಗುತ್ತದೆ, ಈ ನಿಟ್ಟಿನಲ್ಲಿ ರೈತರ ಆರ್ಥಿಕ ಸ್ವಾವಲಂಬನೆಗೆ ಈ ರೀತಿಯ ಕಾರ್ಯಕ್ರಮಗಳು ಅತ್ಯಗತ್ಯ ಎಂದರು.

ದೇಶದಲ್ಲಿ ಶೇಕಡ 70ರಷ್ಟು ಜನರು ಕೃಷಿ ಅವಲಂಬಿತರಾಗಿದ್ದಾರೆ, ಆದರೆ ನಿರೀಕ್ಷಿತ ಮಟ್ಟದಲ್ಲಿ ರೈತರ ಅಭಿವೃದ್ಧಿ ಆಗುತ್ತಿಲ್ಲ ಐದರಿಂದ ಹತ್ತು ಎಕರೆ ಜಮೀನು ಇದ್ದರೂ ರೈತರು ಆರ್ಥಿಕ ಅಭಿವೃದ್ಧಿ ಆಗಲು ಸಾಕಷ್ಟು ಸವಾಲುಗಳಿವೆ. ಮುಖ್ಯವಾಗಿ ಕೂಲಿ ಕಾರ್ಮಿಕರ ಕೊರತೆ, ಬೆಳೆಗೆ ವೈಜ್ಞಾನಿಕ ಬೆಲೆ ಇಲ್ಲದಿರುವುದು ಕಾರಣವಾಗಿದೆ ಎಂದವರು ಹೇಳಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಲ್ಲಿ ಒಂದಾಗಿರುವ ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಕುಟುಂಬದ ಯಜಮಾನಿಗೆ 2000 ರೂಪಾಯಿ ನೀಡುತ್ತಿರುವುದರಿಂದ ರೈತ ಮಹಿಳೆಯರಿಗೂ ಇದರಿಂದ ಆರ್ಥಿಕವಾಗಿ ಅಭಿವೃದ್ಧಿಗೆ ಸಹಕಾರಿಯಾಗಿದೆ, ಆರೋಗ್ಯ ಸಮಸ್ಯೆಯಿರುವ ಮಹಿಳೆಯರು ಆ ಹಣದಿಂದ ಸಣ್ಣ ಪುಟ್ಟ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಚೇತನ್ ಕುಮಾರ್, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಬಿ. ಗೋಪಾಲ್, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀನಿವಾಸ್, ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ನಿಂಗಪ್ಪ, ಕೃಷಿಕ ಸಮಾಜದ ಖಜಾಂಚಿ ಗಿರೀಶ್ ತೋಟದ ಮನೆ, ಕೃಷಿಕ ಸಮಾಜದ ಮಾಗಡಿ ಅಧ್ಯಕ್ಷರಾದ ರಂಗಸ್ವಾಮಿ, ಜಿಲ್ಲಾ ಕೃಷಿಕ ಸಮಾಜದ ಉಪಾಧ್ಯಕ್ಷರಾದ ನಿಂಗೇಗೌಡ, ಶಾಂತಪ್ಪ, ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಎನ್. ಅಂಬಿಕಾ, ಮಂಡ್ಯ ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ್, ಜಿಲ್ಲಾ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರಾಜು ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿದ್ದರು.

# ಎರಡನೇ ಬಾರಿ ಅಧ್ಯಕ್ಷರಾಗಿ ಕ.ರ.ವೇ ಮಂಜು ಅವಿರೋಧ ಆಯ್ಕೆ



● ಪ್ರಜಾವಾಹಿನಿ–ಕುಣಿಗಲ್

ಪಟ್ಟಣದ ದೊಡ್ಡಪೇಟೆಯಲ್ಲಿರುವ ಸುಮಾರು 120 ವರ್ಷ ಇತಿಹಾಸವಿರುವ ಪ್ರತಿಷ್ಠಿತ ಕುಣಿಗಲ್ ಟೌನ್ ವಿವಿದೋದ್ದೇಶ ಸಹಕಾರ ಸಂಘದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಎರಡನೇ ಬಾರಿಗೆ ಭಾರಿ ಅಂತರದಿಂದ ವಿಜೇತರಾಗಿದ್ದ ಕ.ರ.ವೇ. ಮಂಜುನಾಥ್ ಎರಡನೇ ಬಾರಿಗೆ ಅವಿರೋಧವಾಗಿ ಅಧ್ಯಕ್ಷರ ಗಾದೆಗೆ ಆಯ್ಕೆಯಾಗಿದ್ದಾರೆ.

ಶುಕ್ರವಾರ ನಡೆದ ಕುಣಿಗಲ್ ಟೌನ್ ವಿವಿದೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಯಾವುದೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದ ಕಾರಣ ಈ ಹಿಂದೆ ಅಧ್ಯಕ್ಷರಾಗಿದ್ದ ಕರವೇ ಮಂಜುನಾಥ್ ಮತ್ತೊಮ್ಮೆ ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಕೆ.ಎನ್. ದಿನೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ನೂತನ ಅಧ್ಯಕ್ಷ ಕರವೇ ಮಂಜು ಎರಡನೇ ಬಾರಿಗೆ ನಮ್ಮ ಸಹಕಾರ ಸಂಘದ ಮಾನ್ಯ ಸದಸ್ಯರುಗಳು ಆಯ್ಕೆ ಮಾಡಿದ್ದು ಅವರಿಗೆ ಸದಾ ಚಿರಋಣಿಯಾಗಿರುತ್ತೇನೆ. ಈ ಬಾರಿ ವಿಜೇತರಾಗಿರುವ ಎಲ್ಲ ಪದಾಧಿಕಾರಿಗಳನ್ನು ಸಹಮತದೊಂದಿಗೆ ಸಹಕಾರ ಸಂಘದ ಚಟುವಟಿಕೆಯಲ್ಲಿ ಕರದೈವ ಮೂಲಕ ಅವರ ಸಲಹೆ ಸಹಕಾರದೊಂದಿಗೆ ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತೇನೆ. ಶತಮಾನ ಪೂರೈಸಿರುವಂತಹ ನಮ್ಮ ವಿವಿದೋದ್ದೇಶ ಸಹಕಾರ ಸಂಘ ತಾಲೂಕಿಗೆ ಒಂದು ಮಾದರಿ ಸಂಘ ಆಗುವಂತೆ ಚಿಂತನೆಯನ್ನು ಮಾಡಿದ್ದು ಸಹಕಾರ ಸಂಘದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಸಂಪೂರ್ಣ ಅಭಿವೃದ್ಧಿಯತ್ತ ನೆಡೆಯುವಂತೆ ಮಾಡುವ ಮೂಲಕ ಸರ್ವ ಸದಸ್ಯರ ಮತ್ತು ಪದಾಧಿಕಾರಿಗಳ ಋಣಭಾಗ್ಯ ತೀರಿಸುವುದಾಗಿ ತಿಳಿಸಿದರು.

ಚುನಾವಣಾ ಅಧಿಕಾರಿಯಾಗಿ ಸಹಕಾರಿ ಸಂಘದ ಸತ್ಯನಾರಾಯಣ್ ಚುನಾವಣೆ ಕಾರ್ಯನಿರ್ವಹಿಸಿದರು.

ಪತ್ರಕರ್ತರ ಟಿ.ಹೆಚ್. ಆನಂದ್‌ಸಿಂಗ್ ಕೆ.ಎಸ್. ಸುರೇಶ್, ಇ.ಮಂಜು, ಗೋಪಿನಾಥ್, ಬಿಸಿಎಂಎ, ಕೆ.ಎನ್.ಎಲೆಗೌಡ (ಮಾರುತಿ), ಸಂಪತ್ ಕುಮಾರ್, ಸಿದ್ದಗಂಗಯ್ಯ ಮುಂತಾದ ನಿರ್ದೇಶಕರುಗಳು ಪಾಲ್ಗೊಂಡಿದ್ದು ಸಹಕಾರ ಸಂಘದ ಸದಸ್ಯರುಗಳು ಮತ್ತು ಅಭಿಮಾನಿಗಳು ನೂತನ ಅಧ್ಯಕ್ಷರಿಗೆ ಉಪಾಧ್ಯಕ್ಷರುಗಳಿಗೆ ಶುಭ ಕೋರಿದರು.

# ಪೊಲೀಸ್ ಇಲಾಖೆಯಲ್ಲಿ ಮಹಿಳೆಯರು ಕೆಲಸಕ್ಕೆ ಮೆಚ್ಚುಗೆ



● ಪ್ರಜಾವಾಹಿನಿ–ಬೆಂಗಳೂರು

ಮಹಿಳಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಎಂತಹ ಕಠಿಣ ಕೆಲಸ ನೀಡಿದರೂ ಸಹ ಉತ್ತಮವಾಗಿ ಮಾಡುತ್ತಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಿಶ್ವ ಮಹಿಳಾ ದಿನಚರಣೆ ಅಂಗವಾಗಿ ಮೈಸೂರು ರಸ್ತೆಯಲ್ಲಿನ ಸಿಎಆರ್ ಕೇಂದ್ರಸ್ಥಾನದಲ್ಲಿ ಇಂದು ಏರ್ಪಡಿಸಿದ್ದ ವಿಶೇಷ ಮಹಿಳಾ ತುಕಡಿಗಳನ್ನೊಳಗೊಂಡ ಕವಾಯತಿನಲ್ಲಿ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಕೆಲವು ವರ್ಷಗಳ ಹಿಂದೆ ಇಲಾಖೆಯಲ್ಲಿ ಪುರುಷ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾಡುವಂತಹ ಕೆಲಸ ಕಾರ್ಯಗಳನ್ನ ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾಡುವುದಿಲ್ಲ ಎಂಬ ಮನೋಭಾವನೆ ಇತ್ತು. ಈಗ ಅದು ಹೋಗಿದೆ ಎಂದು ಅವರು ಹೇಳಿದರು. ಒಂದು ಸರ್ವೇ ಮಾಡಿದಾಗ ತಮಗೂ ಠಾಣಾ ಬರಹಗಾರರು, ತನಿಖಾ ಸಹಾಯಕರು ಇನ್ನೂ ಮುಂತಾದ ಕೆಲಸಗಳನ್ನು ಕೊಡಬೇಕೆಂದು ಮಹಿಳಾ ಸಿಬ್ಬಂದಿಗಳು ತಿಳಿಸಿದ್ದರು.

ಅದರಂತೆಯೇ ಈಗ ಮಹಿಳಾ ಸಿಬ್ಬಂದಿಗಳಿಗೂ ಸಹ ಎಲ್ಲಾ ಕೆಲಸಗಳನ್ನು ನೀಡಲಾಗುತ್ತಿದೆ. ಇಂದು ಉತ್ತಮ ಕೆಲಸ ಮಾಡಿದಂತಹ 126 ಅಧಿಕಾರಿ ಹಾಗೂ ಗುರುತಿಸಿ ಪ್ರಶಂಸೆ ಪತ್ರವನ್ನು ನೀಡಿರುವುದನ್ನು ನೋಡಿದರೆ ಅವರುಗಳು ಮಾಡಿರುವಂತಹ ಕೆಲಸಗಳು ಮೆಚ್ಚುವಂತಹದ್ದು ಎಂದು ಆಯುಕ್ತರು ಹೇಳಿದರು.

ಇದೇ ಸಂದರ್ಭದಲ್ಲಿ ವಿವಿಧ ಕಾರ್ಪೊರೇಟ್ ಸಂಸ್ಥೆಗಳು ಉಚಿತವಾಗಿ ನೀಡಿರುವ 32 ಇ– ಆಟೋಗಳನ್ನು ಮಹಿಳಾ ಫಲಾನುಭವಿಗಳಿಗೆ ಹಸ್ತಾಂತರಿಸಲಾಯಿತು.

ICICI Home Finance ಕಾರ್ಪೊರೇಟ್ ಕಚೇರಿ – ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ–ಕುರ್ಲಾ ರಸ್ತೆ, ಅಂಧೇರಿ (ಪೂರ್ವ). ಮುಂಬೈ–400059, ಭಾರತ

ಶಾಖಾ ಕಚೇರಿ: ಅಂಗಡಿ ಸಂಖ್ಯೆ 1316/ಅ, 2ನೇ ಮಹಡಿ, 9ನೇ ಕ್ರಾಸ್, 9ನೇ ಮುಖ್ಯರಸ್ತೆ, ತಿರುಮಲಗಿರಿ ವೆಂಕಟೇಶ್ವರ ದೇವಸ್ಥಾನದ ಎದುರು, ಜೆ.ಪಿ.ನಗರ, ಸೆಂಟ್ರಲ್ ಬ್ಯಾಂಕ್ ಮೇಲೆ 2ನೇ ಹಂತ, ಬೆಂಗಳೂರು–560078

ಖಾಸಗಿ ಒಪ್ಪಂದದ ಮೂಲಕ ಸ್ಥಿರ ಆಸ್ತಿಗಳ ಮಾರಾಟಕ್ಕೆ ಸೂಚನೆ

2002ರ ಭದ್ರತಾ ಹಿತಾಸಕ್ತಿ(ಜಾರಿ) ನಿಯಮಗಳ ನಿಯಮ 8(8) ಆರ್/ಡಬ್ಲ್ಯೂ ನಿಯಮ 9(1) ರೊಂದಿಗೆ ಓದಲಾದ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಷನ್ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002ರ ಅಡಿಯಲ್ಲಿ ಖಾಸಗಿ ಒಪ್ಪಂದದ ಮೂಲಕ ಸ್ಥಿರ ಆಸ್ತಿಗಳ ಮಾರಾಟಕ್ಕೆ ಮಾರಾಟ ಸೂಚನೆ.

ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ (ಐಸಿಐಸಿಐ ಹೆಚ್‌ಎಫ್‌ಸಿ) ಕೆಳಗೆ ಉಲ್ಲೇಖಿಸಲಾದ ಅಡಮಾನದ ಆಸ್ತಿಯ ಮಾರಾಟಕ್ಕಾಗಿ ಹಲವಾರು ಇ–ಹರಾಜುಗಳನ್ನು ನಡೆಸಿತು. ಆದಾಗ್ಯೂ, ಅಂತಹ ಎಲ್ಲಾ ಇ–ಹರಾಜುಗಳು ವಿಫಲವಾದವು. ಈಗ, ಆಸಕ್ತ ಖರೀದಿದಾರರು ಮೀಸಲು ಬೆಲೆಯಲ್ಲಿ ಖರೀದಿಸಲು ಪ್ರಸ್ತಾಪದೊಂದಿಗೆ ಐಸಿಐಸಿಐ ಹೆಚ್‌ಎಫ್‌ಸಿ ಅನ್ನು ಸಂಪರ್ಕಿಸಿದ್ದಾರೆ (ದಯವಿಟ್ಟು ಕೆಳಗಿನ ಕೋಷ್ಟಕವನ್ನು ನೋಡಿ). ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಸ್ವಾಧೀನಪಡಿಸಿಕೊಂಡಿರುವ ಸೆಕ್ಯೂರ್ಡ್ ಕ್ರೆಡಿಟ್‌ರಿಗೆ ಅಡಮಾನವಿಟ್ಟಿರುವ/ವಿಧಿಸಲಾದ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು 'ಎಲ್ಲಿ ಇದೆಯೋ ಹಾಗೆಯೇ', 'ಇರುವಂತೆ' ಮತ್ತು ' ಹಾಗೆಯೇ ಇರುವುದನ್ನು', ಕೆಳಗೆ ನೀಡಲಾದ ಸಂಕ್ಷಿಪ್ತ ವಿವರಗಳ ಪ್ರಕಾರ ಖಾಸಗಿ ಒಪ್ಪಂದದ ಮೂಲಕ ಮಾರಾಟ ಮಾಡಲಾಗುವುದು ಎಂದು ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು ಮತ್ತು ಖಾತರಿದಾರರಿಗೆ ಸೂಚನೆ ನೀಡಲಾಗಿದೆ;

| ಕ್ರ ಸಂ. | ಸಾಲಗಾರರು/ಸಹ ಸಾಲಗಾರರು/ಖಾತರಿದಾರರು/ ಕಾನೂನುಬದ್ಧ ಉತ್ತರಾಧಿಕಾರಿಗಳ ಹೆಸರು. ಸಾಲದ ಖಾತೆ ಸಂಖ್ಯೆ | ತಿಳಿದಿರುವ ಹೊರೆಗಳನ್ನು ಹೊಂದಿರುವ ಸುರಕ್ಷಿತ ಆಸ್ತಿ(ಗಳು), ಯಾವುದಾದರೂ ಇದ್ದರೆ, ವಿವರಗಳು | ಬಾಕಿ ಇರುವ ಮೊತ್ತ | ಮೀಸಲು ಬೆಲೆ ಪ್ರಾಮಾಣಿಕ ಹಣ ಠೇವಣಿ | ಆಸ್ತಿ ತಪಾಸಣೆ ದಿನಾಂಕ ಮತ್ತು ಸಮಯ | ಹರಾಜಿನ ದಿನಾಂಕ ಮತ್ತು ಸಮಯ | ಹರಾಜಿನ ದಿನಾಂಕಕ್ಕೆ ಒಂದು ದಿನ ಮೊದಲು | ಸ್ವಾಧೀನ ಹಂತ |
|---|---|---|---|---|---|---|---|---|
| (ಎ) | (ಬಿ) | (ಸಿ) | (ಡಿ) | (ಇ) | (ಎಫ್) | (ಜಿ) | (ಎಚ್) | (ಐ) |
| 1. | ಅಮರನಾಥ್ ಪಿ ಸಿ(ಸಾಲಗಾರ) ಪ್ರೀತಿ ಸಿ ಕೆ(ಸಹ–ಸಾಲಗಾರರು) ಸಾಲ ಖಾತೆ ಸಂಖ್ಯೆ LHBYW00001422419 & LHBYW00001422487 | ಆಸ್ತಿ ಹೊಂದಿರುವ ಸೈಟ್ ಸಂಖ್ಯೆ 86/ಬಿ, ಖಾತಾ ನಂ. 31, ಇಟ್ಟಮಡು ಗ್ರಾಮ ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು | ರೂ. 48,32,002/–ಫೆಬ್ರವರಿ 28, 2025 | ರೂ.42,00,000/– ರೂ. 4,20,000/– | ಮಾರ್ಚ್ 18, 2025 ಬೆಳಿಗ್ಗೆ 11:00 ಮಧ್ಯಾಹ್ನ 03:00 | ಮಾರ್ಚ್ 25, 2025 ಮಧ್ಯಾಹ್ನ 02:00ರಿಂದ 03:00 | ಮಾರ್ಚ್ 24, 2025ರಂದು ಸಂಜೆ 04:00 ಗಂಟೆಗೆ ಮುಂಚಿತವಾಗಿ | ಭೌತಿಕ ಸ್ವಾಧೀನ |
| 2. | ಗಾಯಕ್‌ವಾಡ್ ಪ್ರವೀಣ್‌ಪೋಪಾಟ್ (ಸಾಲಗಾರ) ವೃಶಾಲಿ ಜೀವನ್ ಅವತಡೆ (ಸಹ–ಸಾಲಗಾರರು) ಸಾಲದ ಖಾತೆ ಸಂಖ್ಯೆ. LHBWQ00001468781 & LHBWQ00001468783 | ಫ್ಲಾಟ್ ಸಂಖ್ಯೆ. ಸಿ ಎ –11–04, ಬ್ಲಾಕ್ ಎ 1, 11 ನೇ ಮಹಡಿ, "ಕೆಎಸ್‌ಆರ್ ಕಾರ್ಡೆಲಿಯಾ" ಸೈ. ನಂ. 67/2, ದಾಸರಹಳ್ಳಿ ಗ್ರಾಮ, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು–560064. | ರೂ. 82,95,753/–ಫೆಬ್ರವರಿ 28, 2025 | ರೂ.46,00,000/– ರೂ. 4,60,000/– | ಮಾರ್ಚ್ 18, 2025 ಬೆಳಿಗ್ಗೆ 11:00 ಮಧ್ಯಾಹ್ನ 03:00 | ಮಾರ್ಚ್ 25, 2025 ಮಧ್ಯಾಹ್ನ 02:00ರಿಂದ 03:00 | ಮಾರ್ಚ್ 24, 2025ರಂದು ಸಂಜೆ 04:00 ಗಂಟೆಗೆ ಮುಂಚಿತವಾಗಿ | ಭೌತಿಕ ಸ್ವಾಧೀನ |
| 3. | ಪ್ರದೀಪ್ ಎಂ (ಸಾಲಗಾರ) ಶ್ವೇತಾ ವೈ (ಸಹ–ಸಾಲಗಾರರು) ಸಾಲ ಖಾತೆ ಸಂಖ್ಯೆ LHBYW00001420686 & LHBYW00001438212 | ಅಪಾರ್ಟ್‌ಮೆಂಟ್/ ಫ್ಲಾಟ್ ಬೇರಿಂಗ್ ಪುರಸಭೆ ಸಂಖ್ಯೆ ಸಿ–2, ಬಿಬಿಎಂಪಿ ಆಸ್ತಿ ಸಂಖ್ಯೆ 469/250/11/1–1/7–ಸಿ 2 ರ ಹೊಸ ಖಾತಾ, "ದೀಪ ರೆಸಿಡೆನ್ಸಿ"ಯ ಎರಡನೇ ಮಹಡಿಯಲ್ಲಿದೆ, ವಸತಿ ಸ್ಥಳ ಹೊಸ ಬಿಬಿಎಂಪಿ ಖಾತಾ ಸಂಖ್ಯೆ. 469/250/11/1–1, ಹಳೆಯ ಬಿಬಿಎಂಪಿ ಖಾತಾ ಸಂಖ್ಯೆ. 469/250/11/1–1 & 469/250/11/1–2, ಹಳೆಯ ಬ್ಯಾಟರಾಯನಪುರ ಸಿಎಂಸಿ ಖಾತಾ ಸಂಖ್ಯೆ. 469/250/11/1, ಹಿಂದಿನ ನಾಗವಾರ ಪಂಚಾಯತ್ ಖಾತಾ ಸಂಖ್ಯೆ. 250, ಆಸ್ತಿ ಸಂಖ್ಯೆ. 11/1 ರ ಭಾಗ ಹೆಣ್ಣೂರು ಗ್ರಾಮದಲ್ಲಿದೆ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಹಳೆಯ ಬ್ಯಾಟರಾಯನಪುರ ವಾರ್ಡ್ ಸಂಖ್ಯೆ. 30, ಈಗ ಬಿಬಿಎಂಪಿ ವ್ಯಾಪ್ತಿಗೆ ಬರುತ್ತಿದೆ, ವಾರ್ಡ್ ಸಂಖ್ಯೆ. 24, ಬೆಂಗಳೂರು | ರೂ. 78,93,165/–ಫೆಬ್ರವರಿ 28, 2025 | ರೂ.36,00,000/– ರೂ. 3,60,000/– | ಮಾರ್ಚ್ 18, 2025 ಬೆಳಿಗ್ಗೆ 11:00 ಮಧ್ಯಾಹ್ನ 03:00 | ಮಾರ್ಚ್ 25, 2025 ಮಧ್ಯಾಹ್ನ 02:00ರಿಂದ 03:00 | ಮಾರ್ಚ್ 24, 2025ರಂದು ಸಂಜೆ 04:00 ಗಂಟೆಗೆ ಮುಂಚಿತವಾಗಿ | ಭೌತಿಕ ಸ್ವಾಧೀನ |
| 4. | ಜಯಕುಮಾರ್ ಎಲ್ (ಸಾಲಗಾರ) ಜಯಲಕ್ಷ್ಮಿ ಎನ್ (ಸಹ–ಸಾಲಗಾರರು) ಸಾಲದ ಖಾತೆ ಸಂಖ್ಯೆ. LHBYW00001419395 & LHBYW00001444038 | ಅಪಾರ್ಟ್‌ಮೆಂಟ್ / ಫ್ಲಾಟ್ ಬೇರಿಂಗ್ ಪುರಸಭೆ ಸಂಖ್ಯೆ ಡಿ–3, ಬಿಬಿಎಂಪಿ ಆಸ್ತಿ ಸಂಖ್ಯೆ 469/250/11/1–1/11 ಡಿ–3 ರ ಹೊಸ ಖಾತಾ, "ದೀಪಾ ರೆಸಿಡೆನ್ಸಿ"ಯ ಮೂರನೇ ಮಹಡಿಯಲ್ಲಿದೆ, ಹೊಸ ಬಿಬಿಎಂಪಿ ಖಾತಾ ಸಂಖ್ಯೆ 469/250/11/1–1 & 469/250/11/1–2 ಹೊಂದಿರುವ ವಸತಿ ಸ್ಥಳ, ಹಳೆಯ ಬ್ಯಾಟರಾಯನಪುರ ಸಿಎಂಸಿ ಖಾತಾ ಸಂಖ್ಯೆ 469/250/11/1, ಹಿಂದಿನ ನಾಗವಾರ ಪಂಚಾಯತ್ ಖಾತಾ ಸಂಖ್ಯೆ 250, ಆಸ್ತಿ ಸಂಖ್ಯೆ 11/1 ರ ಭಾಗ ಹೆಣ್ಣೂರು ಗ್ರಾಮದಲ್ಲಿದೆ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಹಳೆಯ ಬ್ಯಾಟರಾಯನಪುರ ವಾರ್ಡ್ ಸಂಖ್ಯೆ 30, ಈಗ ಬಿಬಿಎಂಪಿ ವ್ಯಾಪ್ತಿಗೆ ಬರುತ್ತಿದೆ, ವಾರ್ಡ್ ಸಂಖ್ಯೆ 24, ಬೆಂಗಳೂರು. | ರೂ. 69,84,701/–ಫೆಬ್ರವರಿ 28, 2025 | ರೂ.33,00,000/– ರೂ. 3,30,000/– | ಮಾರ್ಚ್ 18, 2025 ಬೆಳಿಗ್ಗೆ 11:00 ಮಧ್ಯಾಹ್ನ 03:00 | ಮಾರ್ಚ್ 25, 2025 ಮಧ್ಯಾಹ್ನ 02:00ರಿಂದ 03:00 | ಮಾರ್ಚ್ 24, 2025ರಂದು ಸಂಜೆ 04:00 ಗಂಟೆಗೆ ಮುಂಚಿತವಾಗಿ | ಭೌತಿಕ ಸ್ವಾಧೀನ ಆನ್‌ಲೈನ್ |

ಹರಾಜನ್ನು ನಮ್ಮ ಹರಾಜು ಸಂಸ್ಥೆ ವ್ಯಾಲ್ಯೂ ಟ್ರಸ್ಟ್ ಕ್ಯಾಪಿಟಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ವೆಬ್‌ಸೈಟ್ (https://BidDeal.in)ನಲ್ಲಿ ನಡೆಸಲಾಗುತ್ತದೆ. ನಿರೀಕ್ಷಿತ ಬಿಡ್‌ದಾರರು ಮಾರ್ಚ್ 24, 2025 ರಂದು ಅಥವಾ ಅದಕ್ಕೂ ಮೊದಲು ಈ ಜಾಹೀರಾತಿನಲ್ಲಿ ಮೇಲೆ ಉಲ್ಲೇಖಿಸಲಾದ ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಶಾಖೆಯ ವಿಳಾಸದಲ್ಲಿ ಅರ್ನೆಸ್ಟ್ ಮನಿ ಠೇವಣಿ(ಇಎಂಡಿ), ಆರ್‌ಟಿಜಿಎಸ್/ಡಿಮ್ಯಾಂಡ್ ಡ್ರಾಫ್ಟ್(ಡಿಡಿ) (ಕಾಲಮ್ ಇ ನೋಡಿ)ಅನ್ನು ಸಲ್ಲಿಸಬೇಕು. ನಿರೀಕ್ಷಿತ ಬಿಡ್‌ದಾರರು ಮಾರ್ಚ್ 24, 2025ರಂದು ಅಥವಾ ಅದಕ್ಕೂ ಮೊದಲು ಈ ಜಾಹೀರಾತಿನಲ್ಲಿ ಮೇಲೆ ಉಲ್ಲೇಖಿಸಲಾದ ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಶಾಖೆಯ ವಿಳಾಸದಲ್ಲಿ ನೋಂದಣಿ ಅರ್ಜಿ ಮತ್ತು ಬಿಡ್ ನಿಯಮಗಳು ಮತ್ತು ಷರತ್ತುಗಳ ನಮೂನೆಯ ಸಹಿ ಮಾಡಿದ ಪ್ರತಿಯನ್ನು ಸಹ ಸಲ್ಲಿಸಬೇಕು. ಅರ್ನೆಸ್ಟ್ ಮನಿ ಠೇವಣಿ, ಡಿಮಾಂಡ್ ಡ್ರಾಫ್ಟ್(ಡಿಡಿ) ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕಿನಿಂದ "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ – ಹರಾಜು" ಹೆಸರಿನಲ್ಲಿ ಈ ಜಾಹೀರಾತಿನಲ್ಲಿ ಉಲ್ಲೇಖಿಸಲಾದ ಶಾಖಾ ಕಚೇರಿ ವಿಳಾಸದಲ್ಲಿ ಪಾವತಿಸಬೇಕು.

ಸಾರ್ವಜನಿಕರು ಮೇಲೆ ತಿಳಿಸಿದ ಆಸಕ್ತ ಖರೀದಿದಾರರು ನೀಡುವ ಮೊತ್ತಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ವಿನಂತಿಸಲಾಗಿದೆ. ಮೇಲೆ ತಿಳಿಸಿದ ಆಸಕ್ತ ಖರೀದಿದಾರರು ನೀಡುವ ಮೊತ್ತಕ್ಕಿಂತ ಹೆಚ್ಚಿನ ಬಿಡ್‌ಗಳನ್ನು, ಐಸಿಐಸಿಐ ಹೆಚ್‌ಎಫ್‌ಸಿ ಸ್ವೀಕರಿಸದಿದ್ದರೆ, ಅಡಮಾನ ಇಟ್ಟ ಆಸ್ತಿಯನ್ನು ಭದ್ರತಾ ಆಸಕ್ತಿ(ಜಾರಿ) ನಿಯಮಗಳು, 2002ರ ನಿಯಮ 8(8) ಆರ್/ಡಬ್ಲ್ಯೂ ನಿಯಮ 9(1) ರ ಪ್ರಕಾರ ಸದರಿ ಆಸಕ್ತ ಖರೀದಿದಾರರಿಗೆ ಮಾರಾಟ ಮಾಡಲಾಗುತ್ತದೆ ಎಂದು ಇಲ್ಲಿ ತಿಳಿಸಲಾಗಿದೆ. ಪರಿಶೀಲನೆ, ಮಾರಾಟದ ನಿಯಮಗಳು ಮತ್ತು ಷರತ್ತುಗಳು ಅಥವಾ ಬಿಡ್‌ಗಳ ಸಲ್ಲಿಕೆಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ ದಯವಿಟ್ಟು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ಅನ್ನು 9920807300 ನಲ್ಲಿ ಸಂಪರ್ಕಿಸಿ.

ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೆ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.icicihfc.com/ಗೆ ಭೇಟಿ ನೀಡಿ.

ದಿನಾಂಕ: ಮಾರ್ಚ್ 09, 2025
ಸ್ಥಳ: ಉತ್ತರಹಳ್ಳಿ ಹೋಬಳಿ, ಕೃಷ್ಣರಾಜಪುರ ಹೋಬಳಿ, ಕಸಬಾ ಹೋಬಳಿ

ಅಧಿಕೃತ ಅಧಿಕಾರಿ, "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್"
ಸಿಐಎನ್ ಸಂಖ್ಯೆ U65922MH1999PLC120106

# 17.65 ಲಕ್ಷ ರೂ. ಮೌಲ್ಯದ ಚಿನ್ನದ ಸರ ವಶ: ಎಸ್‌ಪಿ ಅಶೋಕ್

● ಪ್ರಜಾವಾಹಿನಿ–ತುಮಕೂರು




ಜಿಲ್ಲೆಯಲ್ಲಿ ಒಟ್ಟು 8 ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದ್ದ 11 ಪ್ರಕರಣಗಳಲ್ಲಿ ಒಟ್ಟು 23,01,000 ರೂ. ಮೌಲ್ಯದ ಸರಗಳ ಕಳ್ಳತನವಾಗಿದ್ದು, ಈ ಪೈಕಿ 8 ಪ್ರಕರಣಗಳನ್ನು ಪತ್ತೆ ಮಾಡಿ 17,65,000 ರೂ. ಮೌಲ್ಯದ ಸರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ. ವಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಎಲ್ಲ ಮಾಹಿತಿ ನೀಡಿದ ಎಸ್‌ಪಿ: ನಗರದ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 4 ಸುಲಿಗೆ ಪ್ರಕರಣಗಳು ದಾಖಲಾಗಿ 9,80,000 ರೂ. ಮೌಲ್ಯದ ಸ್ವತ್ತು ಕಳ್ಳತನವಾಗಿದ್ದು, ಈ ಪೈಕಿ ಅಮೃತೂರು, ಪಟ್ಟನಾಯಕನಹಳ್ಳಿ, ಜಯನಗರದಲ್ಲಿ ಈ 3 ಪ್ರಕರಣಗಳನ್ನು ಪತ್ತೆ ಮಾಡಿ 9,60,000 ರೂ. ಮೌಲ್ಯದ ಸರಗಳನ್ನು ವಶಪಡಿಸಿಕೊಳ್ಳಲಾಗಿದೆ. ಮಧುಗಿರಿ, ಶಿರಾ, ಹುಲಿಯೂರುದುರ್ಗ, ಹೊಸ ಬಡಾವಣೆ, ಕೊಡಿಗೇನಹಳ್ಳಿ, ಕೋರ, ಅಮೃತೂರು, ತಿಪಟೂರು ನಗರ ವ್ಯಾಪ್ತಿಯ ಒಟ್ಟು 8 ಸರಗಳ್ಳತನ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ಎಂದರು.

ತುರುವೇಕೆರೆ ಪಟ್ಟಣದ ವಿಶ್ವನಾಥ ಎಂಬುವವರು ಬ್ಯಾಂಕ್ ಆಫ್ ಬರೋಡಾದಲ್ಲಿ ಅಡವಿಟ್ಟಿದ್ದ ಚಿನ್ನದ ಒಡವೆಗಳನ್ನ ಹಾಗೂ 2,90,000 ರೂ. ಹಣ ಬಿಡಿಸಿಕೊಂಡು ತಮ್ಮ ಬೈಕ್ ಸೈಡ್ ಬ್ಯಾಗ್‌ನಲ್ಲಿಟ್ಟುಕೊಂಡು ಹೋಗುತ್ತಿದ್ದರು. ಆಗ ಅವರು ತುರುವೇಕೆರೆ ಕೆ.ಬಿ ಕ್ರಾಸ್ ರಸ್ತೆಯ ಮುಖ ರಸ್ತೆಯ ಮುಂಭಾಗದ ಪೆಟ್ರೋಲ್ ಬಂಕ್ ಹತ್ತಿರ ಕ್ಯಾನ್‌ಗೆ ಡೀಸೆಲ್ ಹಾಕಿಸಿಕೊಳ್ಳಲು ಹೋದಾಗ ಅವರನ್ನ ಗುರಿಯಾಗಿಸಿಕೊಂಡು ಅವರ ಗಮನ ಬೇರೆಡೆಗೆ ಸೆಳೆದು, ಹಣ ಕಳ್ಳತನ ಮಾಡಲಾಗಿತ್ತು. ಇದರ ಆರೋಪಿಗಳಾದ ಶಿವಮೊಗ್ಗ ಜಿಲ್ಲೆಯ ಲಕ್ಷ್ಮಣ್ ತೇಜು ಬಿನ್ ಶ್ರೀನಿವಾಸ್ (21), ಪ್ರಭು ಯಲ್ಲಪ್ಪ (22), ಕುಮಾರ್ ಬಿನ್ ಲಕ್ಷ್ಮಣ (40) ಎಂಬುವವರನ್ನ ಬಂಧಿಸಲಾಗಿದೆ ಎಂದು ಹೇಳಿದರು.

ಅಲ್ಲದೇ ಕೆಂಪು ಮತ್ತು ಬಿಳಿ ಹರಳಿರುವ ಬಂಗಾರದ ಲಾಂಗ್ ಚೈನ್ (ತೂಕ 48.64 ಗ್ರಾಂ) ಹಾಗೂ ಬಿಳಿ ಹರಳಿರುವ ಮುತ್ತಿನ ಓಲೆ ಜುಮಕಿ (ತೂಕ 11.51 ಗ್ರಾಂ) ಈ ಒಡವೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕುಣಿಗಲ್, ಚಿಕ್ಕಬಳ್ಳಾಪುರ, ನೆಲಮಂಗಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ತಲಾ ಒಂದೊಂದು ಪ್ರಕರಣಗಳು ಪತ್ತೆಯಾಗಿವೆ. ಈ ಆರೋಪಿಗಳಿಂದ ಒಟ್ಟು 3,45,000 ರೂ. ನಗದು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದ್ದಾರೆ.

8 ಪ್ರಕರಣಗಳು ಪತ್ತೆ ಲಕ್ಷ ಲಕ್ಷ ಮೌಲ್ಯದ ಸರಗಳು ವಶಕ್ಕೆ: 8 ಪ್ರಕರಣಗಳನ್ನು ಪತ್ತೆಮಾಡಿ, 17,65,000 ರೂ. ಮೌಲ್ಯದ ಸರಗಳನ್ನು ವಶಪಡಿಸಿಕೊಳ್ಳಲಾಗಿದೆ. ರಮೇಶ್ ಬಿನ್ ಬಾಬು (34) ಹಾಗೂ ಶಿವಮೊಗ್ಗ – ಜಿಲ್ಲೆ ಮತ್ತು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಚರಣ್ ಬಿನ್ ಶ್ರೀನಿವಾಸ್ (17) ಆರೋಪಿಗಳನ್ನು ಬಂಧಿಸಲಾಗಿದೆ ಎಂದರು.

ಅಂತಾರಾಜ್ಯ ಕಳ್ಳರ ಬಂಧನ: ತುರುವೇಕೆರೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸರ್ಕಾರಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಸೋಗಿನಲ್ಲಿ ಪ್ರಯಾಣಿಕರ ಬ್ಯಾಗಿನಲ್ಲಿಟ್ಟಿದ್ದ ಮತ್ತು ಧರಿಸಿದ ಚಿನ್ನದ ಒಡವೆಗಳನ್ನು ಕಳವು ಮಾಡುತ್ತಿದ್ದ ಅಂತರ ರಾಜ್ಯ ಕಳ್ಳರನ್ನು ಬಂಧಿಸಲಾಗಿದೆ. ತಮಿಳುನಾಡಿನ ಸೇಲಂ ಜಿಲ್ಲೆ ಅಯೋಧ್ಯ ಪಟ್ಟಣದ ಶಾಂತಿ ಕೊಂ ವೇಲುಪಾಂಡಿ (42), ಸೇಲಂನ ಎಂ ಬಿನ್ ಮುರುಗೇಶ್ (45)ರನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಶಿರಾ ನಗರ ಪೊಲೀಸ್ ಠಾಣೆಯ ಒಟ್ಟು ನಾಲ್ಕು ಪ್ರಕರಣಗಳನ್ನು ಪತ್ತೆ ಮಾಡಿ ಒಟ್ಟು ಬೆಲೆ 4,00,000 ರೂ. ಬೆಲೆ ಬಾಳುವ ಒಂದು ಕೆಂಪು ಮತ್ತು ಬಿಳಿ ಹರಳಿರುವ ಬಂಗಾರದ ಲಾಂಗ್ ಚೈನ್ (ತೂಕ 48.64 ಗ್ರಾಂ) ಹಾಗೂ ಬಿಳಿ ಹರಳಿರುವ ಮುತ್ತಿನೋಲೆ ಜುಮಕಿ (ತೂಕ 11.51 ಗ್ರಾಂ) ಈ ಒಡವೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದರು.